# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 09/2022

ಡಬ್ಲೂ. ಡಬ್ಲ್ಯೂ– 1

**<u>ದಿನಾಂಕ 18.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಎ.ಸಿ.ಎನ್. ವಕೀಲರಿಂದಃ**

ದಿನಾಂಕ 10.11.2020 ರಂದು Tripartite Settlement ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಹೌದು ಎಂದು ಉತ್ತರಿಸಿರುತ್ತಾರೆ. ಆದ್ದರಿಂದ ಸದರಿ ದಾಖಲೆಯ ಮೂಲ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಎಂ– 1 ಎಂದು ಗುರುತಿಸಲಾಯಿತು.

ದಿನಾಂಕ 14.02.2018 ರಂದು 2 ನೇ ಪಕ್ಷಗಾರರು 125 ಜನ ಕಾರ್ಮಿಕರನ್ನು ರಿಟ್ರೆಂಚ್ ಮಾಡಲು ಸಂಬಂಧಪಟ್ಟ ಇಲಾಖೆಯನ್ನು ಅನುಮತಿ ಕೋರಿದ್ದು ಸದರಿ ದಾಖಲೆ ಈಗಾಗಲೇ ನಿ.ಡಬ್ಲೂ– 1 ಎಂದು ನ್ಯಾಯಾಲಯದ ದಾಖಲೆಗಳಲ್ಲಿ ಗುರುತಿಸಲ್ಪಟ್ಟಿರುತ್ತದೆ. ಅದಕ್ಕೆ ಸರ್ಕಾರ ಅನುಮತಿಯನ್ನು ತಿರಸ್ಕರಿಸಿರುವ ಬಗ್ಗೆ ನಿ.ಡಬ್ಲೂ–2 ರ ಪ್ರಕಾರ ನಾನು ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರು ಮಾಡಿರುತ್ತೇನೆ ಎಂದರೆ ಹೌದು.

ದಿನಾಂಕ 03.07.2020 ರಂದು ನಿ.ಡಬ್ಲೂ–3 ರ ಪ್ರಕಾರ 2 ನೇ ಪಕ್ಷಗಾರ ಸಂಸ್ಥೆಗೆ ಅರ್ಜಿಯನ್ನು ನೀಡಿರುತ್ತೇವೆ ಎಂದರೆ ಹೌದು. ನಿ.ಡಬ್ಲೂ–4 ರ ಪ್ರಕಾರ ಮತ್ತೊಂದು ಅರ್ಜಿಯನ್ನು ಎ.ಎಲ್.ಸಿ.ರವರಿಗೆ ಕೊಟ್ಟಿರುತ್ತೇವೆ ಎಂದರೆ ಹೌದು. ನಿ.ಡಬ್ಲೂ–5 ರ ಪ್ರಕಾರ ಕಚ್ಚಾ ಸರಕುಗಳನ್ನು ಏಕೆ ಸಾಗಿಸುತ್ತಿದ್ದಾರೆ ಎನ್ನುವ ಬಗ್ಗೆ ನಮಗೆ ಉತ್ತರ ನೀಡಿರುತ್ತಾರೆ ಎಂದರೆ ಹೌದು.

ನಾವು ಲೇಆಫ್ ಹಾಗೂ ರಿಟ್ರೆಂಚ್‌ಮೆಂಟ್ ಬಗ್ಗೆ ಡಿ.ಎಲ್.ಸಿ.ರವರಿಗೂ ಕೂಡ ಅರ್ಜಿಯನ್ನು ನೀಡಿರುತ್ತೇವೆ ಎಂದರೆ ಹೌದು. ವಿಚಾರಣೆ ಸಮಯದಲ್ಲಿ ಡಿ.ಎಲ್.ಸಿ.ರವರು ಸಂಧಾನ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿರುತ್ತಾರೆ. ನಾನು ಸದರಿ ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 20.01.2021ರಂದು ನಾನು ಡಿ.ಎಲ್.ಸಿ.ರವರ ಮುಂದೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಎಂ–2 ಎಂದು ಗುರುತಿಸಲಾಯಿತು. ಒಟ್ಟು ಲೇಆಫ್ ಆಗಿದ್ದ ಕಾರ್ಮಿಕರ ಪೈಕಿ 42 ಜನ ಕಾರ್ಮಿಕರು ರಿಟ್ರೆಂಚ್ ಆಗಿದ್ದವರನ್ನು ಬಿಟ್ಟು 75 ಜನ ಕಾರ್ಮಿಕರನ್ನು ಒಳಗಡೆ ತೆಗೆದುಕೊಂಡಿದ್ದರು ಎಂದರೆ ಸರಿ. ಆ ಸಮಯದಲ್ಲಿ ಕಾರ್ಖಾನೆಯಲ್ಲಿ ಸೂಪರವೈಜಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕರು ಇದ್ದರು ಎಂದರೆ ಹೌದು. ಅದರಲ್ಲಿ ಕೆಲವು ಸೂಪರವೈಜಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹಾಗೂ ಕೆಲವು ವರ್ಕಮೆನ್ ಕೆಲಸ ಮಾಡುತ್ತಿದ್ದ ಕಾರ್ಮಿಕರು ಸ್ವಯಂ ನಿವೃತ್ತಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿ.

ಸೂಪರವೈಜಿಂಗ್ ಕೆಲಸ ಮಾಡುತ್ತಿದ್ದ ಕಾರ್ಮಿಕರಾದ ರಾಜೀವ ಜವಳಿ, ಶ್ರೀನಿವಾಸ ಪ್ರಸಾದ್, ಶಿವನಾಯಕ, ವೆಂಕಟೇಶ ಹೆಚ್.ಅರ್., ವಿಜಯಕುಮಾರ ಎಸ್., ಗುರುಲಿಂಗಯ್ಯ, ವಿನಯ್ ಎಸ್.ಎ., ಇವರುಗಳು ನ್ಯಾಯಾಲಯದ ಮುಂದೆ ವಿವಾದ ಎತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ರಾಜೀವ ಜವಳಿ, ಶ್ರೀನಿವಾಸ ಪ್ರಸಾದ್ ಮತ್ತು ಶಿವನಾಯಕರನ್ನು ಹೊರತುಪಡಿಸಿ ಉಳಿದವರು ನ್ಯಾಯಾಲಯದ ಮುಂದೆ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆದುಕೊಂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಉಳಿದುಕೊಂಡಿದ್ದ ಮೂರು ಜನರ ಪ್ರಕರಣದಲ್ಲಿ ಸದರಿ ಮೂರು ಜನರು ಕಾರ್ಮಿಕ ಎನ್ನುವ ಗುಂಪಿಗೆ ಸೇರಿದವರಲ್ಲ ಎಂದು ಅರ್ಜಿ ವಜಾ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು

ಬಿಟ್ಟು ಉಳಿದ ಕಾರ್ಮಿಕರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ, ಕೆಲವು ವಿಚಾರಗಳು ನನಗೆ ಗೊತ್ತಿಲ್ಲ ಎಂದು ಹೇಳಿರುತ್ತಾರೆ.

ನಿ.ಎಂ-1ರ ದಾಖಲೆಯ ಪೀಠಿಕೆಯಲ್ಲಿ The workman have withdrawn the layoff dispute in PTN/CR-02/2020-21 ಎಂದು ನಮೂದಾಗಿರುತ್ತದೆ ಎಂದರೆ ಹೌದು. ರಿಟ್ರೆಂಚ್ ಆದವರ ಪೈಕಿ ಮೂರು ಜನರನ್ನು ಒಂದು ಗುಂಪಿನಲ್ಲಿ ಹಾಗೂ ಇಬ್ಬರನ್ನು ಯಾವ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರೋ ಆ ವಿಭಾಗಕ್ಕೆ ಕೆಲಸಕೆ ತೆಗೆದು ಕೊಂಡಿರುತ್ತಾರೆ ಎಂದರೆ ಸಾಕ್ಷಿ ಜೇಷ್ಠತೆ ಆಧಾರದ ಮೇಲೆ ತೆಗೆದುಕೊಂಡಿಲ್ಲ, ಅವರಿಗೆ ಇಷ್ಟ ಬಂದವರನ್ನು ತೆಗೆದುಕೊಂಡಿರುತ್ತಾರೆ ಎಂದು ಹೇಳುತ್ತಾರೆ. ರಿಟ್ರೆಂಚ್ ಆದವರನ್ನು ಬಿಟ್ಟು ಹೊರಗಿನಿಂದ ವರ್ಕಮೆನ್ ಕೆಲಸಕ್ಕೆ ಯಾರನ್ನು ತೆಗೆದುಕೊಂಡಿಲ್ಲ ಎಂದರೆ ಹೌದು. ಸೆಟಲ್ ಮೆಂಟ್ ಆಗಿದ್ದರೂ ಕೂಡ ನಾನು ಅದಕ್ಕೆ ಜೀವ ಕೊಟ್ಟು ಅದನ್ನು ಮತ್ತೆ ರಿಓಪನ್ ಮಾಡಿಸಿರುತ್ತೇನೆ ಎಂದರೆ ಸಾಕ್ಷಿ ಸರಿ ಎಂದು ಉತ್ತರಿಸಿರುತ್ತಾರೆ. ನಾನು ಆಡಳಿತ ವರ್ಗಕ್ಕೆ ತೊಂದರೆ ನೀಡುವ ಉದ್ದೇಶದಿಂದ ಒಂದರ ಮೇಲೆ ಒಂದು ಪ್ರಕರಣವನ್ನು ಆಡಳಿತ ವರ್ಗದ ವಿರುದ್ಧ ಮಾಡುತ್ತಿರುತ್ತೇನೆ ಎದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**